**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಮಿಸ್  8/2023</u>**

ಪಿ ಡಬ್ಲ್ಯೂ -1

**<u>ದಿನಾಂಕ 17-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ ಕೆ ಎಸ್ ಡಿ  ಎದುರುದಾರರ ಪರ ವಕೀಲರುಃ</u>**

ನಮ್ಮ ತಂದೆ  ನರಸಿಂಹೆಗೌಡ ಮತ್ತು ಪ್ರತಿವಾದಿಯ ತಂದೆ ಶ್ರೀನಿವಾಸ ಇಬ್ಬರು ಜಮೀನನ್ನು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಚುಂಚನಕಟ್ಟೆ ಹೋಬಳಿ, ಹಳಿಯೂರು ಗ್ರಾಮದಲ್ಲಿದೆ ಎಂದರೆ ಸರಿ.  ಸ ನಂ. 426/11 ರಲ್ಲಿ 9 ಗುಂಟೆ ಮತ್ತು ಸ ನಂ, 426/12 ರಲ್ಲಿ 8 ಗುಂಟೆ  ಒಟ್ಟು 17 ಗುಂಟೇ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಇಬ್ಬರು ಸಮಾನವಾಗಿ ಹಂಚಿಕೊಂಡಿರುತ್ತಾರೆ ಎಂದರೆ ಸರಿ. ತಲಾ 8 ½ ಗುಂಟೆ ಜಮೀನನ್ನು ಹಂಚಿಕೊಂಡು ಅಲ್ಲೇ ನಾವು ಸ್ವಾಧೀನದಲ್ಲಿದ್ದವೆ ಎಂದರೆ ಸರಿ.

**2.** ನಮ್ಮ ಮತ್ತು  ಪ್ರತಿವಾದಿಗಳ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸಿದ್ದೇಗೌಡರ ಮಗ ಹನುಮಂತೆಗೌಡರ ಹೊಲ, ಉತ್ತರಕ್ಕೆ ನಟೇಶರವರ ಹೊಲ, ದಕ್ಷಿಣದ ಅರ್ಧ ಭಾಗದಲ್ಲಿ ನಾವು ಇದ್ದೇವೆ ಎಂದರೆ ಸರಿ.  ನಮ್ಮ ಎಲ್ಲಾ ಗುರುತಿನ ಪತ್ರದ ದಾಖಲೆಗಳು ಸಹ ಇದೇ ವಿಳಾಸದಲ್ಲಿರುತ್ತವೆ ಎಂದರೆ ಸರಿ.  ಪ್ರತಿವಾದಿ ಕಾವ್ಯ ರವರು ದಾವಾ ಸಂಖ್ಯೆ 131/2021 ನ್ನು ಸಲ್ಲಿಸುವ ಪೂರ್ವದಲ್ಲಿ ನಮಗೆ ನೋಟೀಸ್ ನ್ನು ನೀಡಿದ್ದರು ಎಂದರೆ ಸರಿಯಲ್ಲ.

**3**. ನಾನು ಪದವೀದರಳಾಗಿರುತ್ತೇನೆ. ನನ್ನ ಸಹಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಅಂಚೆ ಇಲಾಖೆಯ ಸ್ವೀಕೃತಿಯನ್ನು ತೋರಿಸಿದ್ದು ಸಕ್ಷಿ ಸದರಿ ಸ್ವೀಕೃತಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ನೋಟೀಸ್ ನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ

ನೊಟೀಸ್ ಗೆ  ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಸಾಕ್ಷಿ ಮುಂದುವರೆದು ನಮ್ಮ ಅಣ್ಣ ಸದರಿ ವಿಚಾರವನ್ನು ನಾನು ನೋಡಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**4**.  2021 ರಲ್ಲಿ ನಮಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿರುತ್ತದೆ ಎಂದರೆ ಸರಿ. ನಾನು ವಕೀಲರನ್ನು ನೇಮಕ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ನಮ್ಮ ಅಣ್ಣ ನೋಡಿಕೊಳ್ಳುವುದಾಗಿ ತಿಳಿಸಿರುತ್ತಾರೆ. ನಾನು ಪಡೆದ ನೋಟೀಸ್ ಗೂ ಹಾಗೂ ನಮ್ಮ ಅಣ್ಣನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.  ನಾನು ಕಾವ್ಯರವರು ನಟೇಶ್ ರವರಿಗೆ ಮಾಡಿಕೊಟ್ಟ ಯಾವುದೇ ಪತ್ರವನ್ನು ನಾನು ನೋಡಿರುವುದಿಲ್ಲ.

**5**.  ದಾವೆ ಮುಗಿಯುವವರೆಗೆ ಎದುರುದಾರರು ಯಾವುದೇ ಕ್ರಯಪತ್ರವನ್ನು ನಟೇಶ ರವರಿಗೆ ಮಾಡಿ ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಟೇಶ ಮತ್ತು ಕಾವ್ಯರವರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದಂತೆ ಎದುರುದಾರರು ಅವರ ಭಾಗದ ಜಮೀನನ್ನು ನಟೇಶರವರಿಗೆ  ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**6**.  ನಾವು ಅಳತೆ ಕಾರ್ಯವನ್ನು ನಿರ್ವಹಿಸಲು  ಯಾವುದೇ ಅರ್ಜಿಯನ್ನು ಭೂಮಾಪನಾ ಅಧಿಕಾರಿಗಳಿಗೆ ನೀಡಿರುವುದಿಲ್ಲ.  ನಮ್ಮ ತಾಯಿ ದಾವೆಯನ್ನುಸಲ್ಲಿಸಿದ ಕಾಲದಲ್ಲಿ ಅವರಿಗೆ ಯಾವುದೇ ಆರೋಗ್ಯ ಸಮಸ್ಯೆ ಮತುತ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಚಿಕ್ಕನಾಯಕನ ಹಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ಆದರೆ  ನಾನು ಪ್ರಸ್ತುತ ಹಳಿಯೂರು ಗ್ರಾಮದಲ್ಲಿ ವಾಸವಾಗಿದ್ದೇನೆ.

7.  ನೊಟೀಸ್ ಬಂದಾಗ ನನಗೂ ಸಹ ಗರ್ಭಕೋಶದ ತೊಂದರೆ ಇತ್ತು. ಸದರಿ ವಿಚಾರವನ್ನು ನನ್ನ ಅರ್ಜಿಯಲ್ಲಿ ತಿಳಿಸಿದ್ದೇನೆ. ಎದುರುದಾರ ತಂದೆ ತಾಯಿ ಹಾಗೂ ತಮ್ಮ 3 ಜನ ಮೃತ ಪಟ್ಟಿರುತ್ತಾರೆ  ಮತ್ತು ಎದುರುದಾರರು ಸಹ ಅಲ್ಲಿ ವಾಸವಾಗಿಲ್ಲ ಎಂದರೆ ಸರಿ.

ಸದರಿ ಎದುರುದಾರರ ಜಾಗವನ್ನು ಅಕ್ರಮವಾಗಿ ಹೊಂದುವ ಸಲುವಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ